(ಇಂದು ದಿನಾಂಕಃ 17-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ. ಬಿ. ಎಸ ವಕೀಲರಿಂದ :**

1. ನಾವು 3 ಜನ ಅಣ್ಣ-ತಮ್ಮಂದಿರು ಇರುತ್ತೇವೆ, ನಾನು, ನನ್ನ ಅಣ್ಣ ಶರಣಪ್ಪ ಮತ್ತು ಹಣುಮಂತ ಇರುತ್ತೇವೆ. ನನಗೆ 3 ಜನ ಅಕ್ಕ-ತಂಗಿಯರು ಅವರ ಹೆಸರು ರುಕ್ಮಿಣಿ, ಜಗದೇವಿ ಮತ್ತು ಶಾಂತಾ ಇರುತ್ತದೆ. ನಾವು 3 ಜನ ಅಣ್ಣ-ತಮ್ಮಂದಿರು ಪಾಲು ಆಗಿರುತ್ತೇವಾ ಎಂದರೆ ಸಾಕ್ಷಿ ನಾನು ದತ್ತು ಹೋಗಿರುತ್ತೇನೆ ಎಂದು ಹೇಳುತ್ತಾರೆ. ನಾನು ದತ್ತು ಹೋಗಿರುತ್ತೇನೆ ಎಂದು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿಲ್ಲ ಎಂದರೆ ಸರಿ. ಶಂಕರೇಪ್ಪ ಮತ್ತು ಹಣುಮಂತ ಬೇರೆ ಆಗಿರುತ್ತಾರೆ. ಶರಣಪ್ಪ ಮತ್ತು ಹಣುಮಂತ ಬೇರೆ ಆಗಿ ಎಷ್ಟು ವರ್ಷ ಆಯಿತು ಎಂದರೆ ಸಾಕ್ಷಿ ನನ್ನ ತಂದೆ ಇದ್ದಾಗಲೆ ಬೇರೆ ಆಗಿರುತ್ತಾರೆ ಎಂದು ಹೇಳುತ್ತಾರೆ. ಒಂದು ಸಲ ಪಾಲು ಆದ ನಂತರ ಶರಣಪ್ಪ ಮತ್ತು ಹಣುಮಂತರವರ ನಡುವೆ ಮತ್ತೆ ಪಾಲು ಆಗುವ ಸಂದರ್ಭ ತಕರಾರು ಬಂದಿರುತ್ತದೆಯಾ ಎಂದರೆ ಸಾಕ್ಷಿ ನನ್ನ ಸಂಬಂಧ ತಕರಾರು ಬಂದಿರುತ್ತದೆ ನಾನು ದತ್ತು ಹೋಗಿಲ್ಲ ಎಂದು ತಕರಾರು ಬಂದಿರುತ್ತದೆ ಎಂದು ಹೇಳುತ್ತಾರೆ. ನನ್ನ ಸಂಬಂಧ ತಕರಾರು ಬಂದಿರುತ್ತದೆ ಎಂದು ನಾನು ಹೇಳುತ್ತಿದ್ದು ಆ ತಕರಾರಿನ ಬಗ್ಗೆ ನಾವು ನ್ಯಾಯಾಲಯಕ್ಕೆ ಬಂದು ಅದನ್ನು ಬಗೆಹರಿಸಿಕೊಂಡಿರುತ್ತೇವೆ. ನನ್ನ ಸಂಬಂಧ ತಕರಾರು ಬಂದಿರುತ್ತದೆ ಆ ತಕರಾರಿನ ಬಗ್ಗೆ ನಾವು ನ್ಯಾಯಾಲಯಕ್ಕೆ ಬಂದು ಅದನ್ನು ಬಗೆಹರಿಸಿಕೊಂಡಿರುತ್ತೇವೆ ಎಂದು ನಾನು ಹೇಳುತ್ತಿದ್ದು ಈ ರೀತಿ ನ್ಯಾಯಾಲಯಕ್ಕೆ ಬಂದು 5-6 ವರ್ಷ ಆಗಿರುತ್ತದೆ. ನನ್ನ ಸಂಬಂಧ ತಕರಾರು ಬಂದಿದ್ದರಿಂದ ಅವರ ನನ್ನ ವಿರುದ್ಧ ದಾವೆ ಸಲ್ಲಿಸಿದ್ದರು. ನನ್ನ ವಿರುದ್ಧ ಹಣುಮಂತರಾಯ ಹಾಗೂ ಶರಣಪ್ಪರವರ ಮಗ ಭೀಮರಾಯ ದಾವೆ ಸಲ್ಲಿಸಿದ್ದರು. ಆ ದಾವೆ

ಮುಕ್ತಾಯವಾಗಿರುತ್ತದೆ. ಆ ದಾವೆಯಲ್ಲಿ ನಾನು 6 ಎಕರೆ ಜಮೀನನ್ನು ಕೊಟ್ಟು ರಾಜಿ ಮಾಡಿಕೊಂಡಿರುತ್ತೇನೆ. ಸರ್ವೆ ನಂಬರ 96 ರ ಉತ್ತರ ದಿಕ್ಷಿಗೆ ಇರುವ ಒಂದು ಜಮೀನನ್ನು 3 ಎಕರೆ ಇದ್ದು ಅದನ್ನು ರುಕ್ಮಿಣಿಯವರ ತಂದೆ ಗುಂಡಪ್ಪಾ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಯಾರಿಗೆ ಮಾರಾಟ ಮಾಡಿರುತ್ತಾರೆ ಎಂದು ಕೇಳುತ್ತಾರೆ. ಸರ್ವೆ ನಂಬರ 96 ರ ಉತ್ತರ ದಿಕ್ಷಿಗೆ ಇರುವ 3 ಎಕರೆ ಜಮೀನಿನ ಮಾಲಿಕ ಮತ್ತು ಕಬ್ಜೆದಾರರು ಖರೀದಿದಾರರು ಇರುತ್ತಾರೆ ಎಂದರೆ ಸಾಕ್ಷಿ ನನ್ನ ತಂದೆ ಕೈಮೇಲೆ ಮಾರಾಟ ಆಗಿರುತ್ತದೆ ಎಂದು ಹೇಳುತ್ತಾರೆ. ನಮ್ಮ ಕುಟುಂಬ ದೊಡ್ಡ ಕುಟುಂಬ ಆಗಿದ್ದರಿಂದ ನಮಗೆ ಆರ್ಥಿಕ ಪರಿಸ್ಥಿತಿ ಸರಿಯಿಲ್ಲದಿದ್ದರಿಂದ ನನ್ನ ತಂದೆ ಆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

2. ರುಕ್ಮಿಣಿಯವರಿಗೆ ಸರ್ವೆ ನಂಬರ 94 ರಲ್ಲಿ 8 ಎಕರೆ ಜಮೀನನ್ನು ಅವರ ಮದುವೆಯಲ್ಲಿ ಕೊಟ್ಟ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಅವರಿಗೆ ಯಾವ ರೀತಿಯಲ್ಲಿ 8 ಎಕರೆ ಜಮೀನು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ರುಕ್ಮಿಣಿಯವರಿಗೆ ಸರ್ವೆ ನಂಬರ 94 ರಲ್ಲಿ 8 ಎಕರೆ ಜಮೀನನ್ನು ಅವರ ಮದುವೆಯಲ್ಲಿ ಕೊಟ್ಟಿರುತ್ತಾರೆ ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ ಸರಿ. ರುಕ್ಮಿಣಿಯವರ ಹೆಸರಿಗೆ 8 ಎಕರೆ ಜಮೀನು ಹೇಗೆ ಮ್ಯುಟೇಷನ ಆಯಿತು ಎಂದು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಹೆಣ್ಣು ಮಕ್ಕಳಿಗೆ ಮದುವೆ ಸಮಯದಲ್ಲಿ ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ನನ್ನ ಭಾವ ತಲಾಟಿ ಆಗಿದ್ದು ತಹಸಿಲ್ದಾರ ಕಛೇರಿಯಲ್ಲಿ ಎಲ್ಲಾ ಕಾಗದ ಪತ್ರಗಳು ಅವರೆ ಬರೆಯುತ್ತಿದ್ದರು ಎಂದರೆ ಸರಿ. ನನ್ನ ಭಾವ ತಲಾಟಿ ಆಗಿದ್ದು ತಹಸಿಲ್ದಾರ ಕಛೇರಿಯಲ್ಲಿ ಎಲ್ಲಾ ಕಾಗದ ಪತ್ರಗಳು ಅವರೆ ಬರೆಯುತ್ತಿದ್ದರು ಆದ್ದರಿಂದ ಕಾಗದ ಪತ್ರ ಹೇಗೆ ಮುಟೇಷನ ಮಾಡಿಕೊಳ್ಳಬೇಕು ಎಂದು ಅವರಿಗೆ ಚನ್ನಾಗಿ ಗೊತ್ತಿತ್ತು ಮತ್ತು ಅವರು ಅವರಿಗೆ

ಅನುಕೂಲವಾಗುವಂತೆ ಮ್ಯುಟೇಷ ಮಾಡಿಸಿರುತ್ತಾರೆ ಎಂದರೆ ಸಾಕ್ಷಿ ಅವರು ಕೇಳಿ ಹೇಳಿ ಮಾಡುತ್ತಿದ್ದರು ಅಧಿಕಾರ ವಿಲ್ಲದೆ ಮಾಡುತ್ತಿರಲಿಲ್ಲ ಎಂದು ಹೇಳುತ್ತಾರೆ. ರುಕ್ಮಿಣಿಯವರ ಹೆಸರಿಗೆ ಸರ್ವೆ ನಂಬರ 94 ರ 8 ಎಕರೆ ಜಮೀನು ಹೇಗೆ ಮ್ಯುಟೇಷನ ಆಯಿತು ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಅವರ ತಂದೆಗೆ ಗೊತ್ತು ಎಂದು ಹೇಳುತ್ತಾರೆ. ಸುಭಮ್ಮನ ತಂದೆ ಗುಂಡಪ್ಪ ಯಾವ ವರ್ಷದಲ್ಲಿ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ನನಗೆ 5 ಜನ ಹೆಣ್ಣು ಮಕ್ಕಳು ಇರುತ್ತಾರೆ. ಸುಭಾಷಚಂದ್ರರವರ ಮಗನಿಗೆ ನನ್ನ ಮಗಳನ್ನು ಕೊಟ್ಟು ಮದುವೆ ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ತಂಗಿ ಹಾಗೂ ಮಗಳು ಇಬ್ಬರನ್ನು ಅವರ ಕುಟುಂಬಕ್ಕೆ ಕೊಟ್ಟಿರುತ್ತೇವೆ ಎಂದು ಹೇಳುತ್ತಾರೆ. ಸುಭಾಷಚಂದ್ರರವರ ಜೊತೆ ನನಗೆ ತುಂಬಾ ಹತ್ತಿರದ ಸಂಬಂಧ ಎಂದರೆ ಸರಿ. ಹಿಂದಿನ ಕಾಲದಲ್ಲಿ ಸರಕಾರಿ ಪಗಾರು ತಿಂಗಳಿಗೆ ರೂ.30-40 ಇರುತ್ತಿತ್ತು ಎಂದರೆ ಸರಿ. ಸುಭಾಷಚಂದ್ರರವರಿಗೆ ಪಗಾರ ಕಡಿಮೆ ಇದ್ದು ಆದರೆ ದೊಡ್ಡ ಕುಟುಂಬ ಇತ್ತು ಎಂದರೆ ಸರಿ. ಗುಂಡಪ್ಪರವರಿಗೆ ಬೆಡಕಪಳ್ಳಿ,ರಾಮತೀರ್ಥ ಹಾಗೂ ಹಲಚೇರಾ ಗ್ರಾಮದಲ್ಲಿ ಆಸ್ತಿ ಇದ್ದವು ಎಂದರೆ ಸರಿ. ಮುಂದೆ ಗುಂಡಪ್ಪ ಬದುಕಿದ್ದಾಗಲೆ ಎಲ್ಲರೂ ಸೇರಿ ಸುಮಾರು 150 ಎಕರೆ ಜಮೀನನ್ನು ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಗುಂಡಪ್ಪ ತೀರಿಕೊಂಡ ನಂತರ ಅವರ ಕುಟುಂಬದಲ್ಲಿ ಯಾರಾದರು ಆಸ್ತಿ ಖರೀದಿ ಮಾಡಿರುತ್ತಾರಾ? ಎಂದರೆ ನನಗೆ ಗೊತ್ತಿಲ್ಲ. ಗುಂಡಪ್ಪ ಬದುಕಿರುವವರೆಗೆ ಪಾಲು ಮಾಡಿ ಸುಭಮ್ಮನಿಗೆ ಒಂದು ಗುಂಟೆ ಜಾಗ ಕೂಡ ಕೊಟ್ಟಿಲ್ಲ ಎಂದರೆ ನನಗೆ ಗೊತ್ತಿಲ್ಲ. ಗುಂಡಪ್ಪ ಬದುಕಿರುವವರೆಗೆ ಆಸ್ತಿಯಲ್ಲಿ ಯಾವುದೇ ಪಾಲು ಮಾಡದೆ ಇದ್ದುದ್ದರಿಂದ ಈಗ ಈ ದಾವೆ ಸಲ್ಲಿಸಿ ನ್ಯಾಯಾಲಯಕ್ಕೆ ಬಂದಿರುತ್ತಾರೆ ಎಂದರೆ ಸಾಕ್ಷಿ ರಾಮತೀರ್ಥದಲ್ಲಿ ಮಾಡಿಕೊಂಡಿರಬಹುದು ಎಂದು ಹೇಳುತ್ತಾರೆ. ರಾಮತೀರ್ಥದಲ್ಲಿ ಮಾಡಿಕೊಂಡಿರುತ್ತಾರೆ

ಎಂದು ನಾನು ಹೇಳುತ್ತಿದ್ದು ಆ ಸಮಯದಲ್ಲಿ ನಾನು ಇದ್ದೆ ಅಥವಾ ಇಲ್ಲವಾ ಎಂದು ನನಗೆ ನೆನಪಿಲ್ಲ. ರಾಮತೀರ್ಥದಲ್ಲಿ ಪಾಲು ಮಾಡಿಕೊಂಡಿರುವ ಬಗ್ಗೆ ನಾನು ದಾಖಲೆ ನೋಡಿರುತ್ತೇನಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಅವರು ಯಾವತ್ತು ಪಾಲು ಮಾಡಿಕೊಂಡಿಲ್ಲ ಆದ್ದರಿಂದ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ರಾಮತೀರ್ಥದಲ್ಲಿ ಪಾಲು ಮಾಡಿಕೊಂಡಿರುತ್ತಾರೆ ಎಂದು ನಾನು ಹೇಳುತ್ತಿದ್ದು ಯಾರು ಯಾರಿಗೆ ಯಾವ ಆಸ್ತಿ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ಗುಂಡಪ್ಪನಿಗೆ ಇರುವ ಎಲ್ಲಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿ ಎಂದರೆ ಸಾಕ್ಷಿ ನನ್ನ ತಂಗಿಯ ಆಸ್ತಿ ಬೇರೆ ಇರುತ್ತದೆ, ಹಲಚೇರಾದಲ್ಲಿ ಬೇರೆ ಆಸ್ತಿ ಇರುತ್ತದೆ ಎಂದು ಹೇಳುತ್ತಾರೆ. ನಾನು ಸುಭಾಷಚಂದ್ರರವರ ಕುಟುಂಬಕ್ಕೆ ನನ್ನ ತಂಗಿ ಹಾಗೂ ಮಗಳ ಮದುವೆ ಮಾಡಿಕೊಟ್ಟಿದ್ದು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಸುಭಾಷಚಂದ್ರರವರ ತಂದೆ ಗುಂಡಪ್ಪರವರು ರುಕ್ಮಿಣಿಯವರ ತಂದೆ ಗುಂಡಪ್ಪರವರಿಗೆ ರೂ.5,00,000/-ಸಾಲ ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ರೂ.5,00,000/-ಸಾಲ ಬಾಬತ್ತು ಪರವಾಗಿ 1996 ರಲ್ಲಿ ರುಕ್ಮಿಣಿಯವರ ಹೆಸರಿಗೆ 8 ಎಕರೆ ಜಮೀನು ಮ್ಯುಟೇಷನ ಆಗಿದೆ ಎಂದರೆ ಸರಿಯಲ್ಲ. ಸರ್ವೆ ನಂಬರ 94 ರಲ್ಲಿ 8 ಎಕರೆ ಜಮೀನು ಗುಂಡಪ್ಪರವರ ಜಮೀನು ಆಗಿದ್ದು ಅದರಲ್ಲಿ ವಾದಿ ಸುಭಮ್ಮನವರ ಹಿಸ್ಸೆ ಇದೆ ಎಂದರೆ ಸಾಕ್ಷಿ ಅದರ ಬಗ್ಗೆ ಯಾವುದೇ ಉತ್ತರ ಇಲ್ಲ ಎಂದು ಹೇಳುತ್ತಾರೆ. ಸಣ್ಣವಯಸ್ಸಿನವರಿದ್ದಾಗ ಗಳಿಕೆ ಮಾಡಲು ಯಾವುದೇ ಆಮದಾನಿ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ 5 ರಿಂದ 8 ರವರು ಸುಭಾಷಚಂದ್ರ ತಂದೆ ಗುಂಡಪ್ಪರವರ ಆಶ್ರಯದಲ್ಲಿ ಇದ್ದರು ಎಂದರೆ ಸಾಕ್ಷಿ ಅವರು ಹಲಚೇರಾದಲ್ಲಿ ಇದ್ದರು ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ಅವರು ಹಲಚೇರಾದ

ಗುಂಡಪ್ಪರವರ ಆಶ್ರಯದಲ್ಲಿ ಇದ್ದರು ಎಂದು ಹೇಳುತ್ತಾರೆ. ಗುಂಡಪ್ಪ ಬದುಕಿರುವವರೆಗೆ ನನ್ನ ಭಾವ ಸುಭಾಷಚಂದ್ರ ಅವರ ತಂದೆ ಹೇಳಿದ್ದನ್ನು ಕೇಳುತ್ತಿದ್ದರು ಎಂದರೆ ಸಾಕ್ಷಿ ಅವರು ಹಲಚೇರಾದಲ್ಲಿ ಇರುವ ಗುಂಡಪ್ಪರವರ ಹತ್ತಿರ ಇರುತ್ತಿದ್ದರು ಎಂದು ಹೇಳುತ್ತಾರೆ. ಸುಭಾಷಚಂದ್ರ ತಂದೆ ಗುಂಡಪ್ಪರವರು ಹಲಚೇರಾ ಗ್ರಾಮದಲ್ಲಿ ಅವರು ಸರ್ವೆ ನಂಬರ 119 ರಲ್ಲಿ ಒಂದು ಮನೆ ಕಟ್ಟಿಸಿದ್ದರು ಎಂದರೆ ಸರಿಯಲ್ಲ. ಸುಭಾಷಚಂದ್ರರವರ ತಂದೆ ಗುಂಡಪ್ಪರವರು ಬದುಕಿರುವವರೆಗೆ ಅಥವಾ ಅವರು ತೀರಿಕೊಂಡ ನಂತರ ಅವರ ಮಕ್ಕಳು ಕಾನೂನು ಬದ್ಧವಾಗಿ ಆಸ್ತಿಗಳನ್ನು ಪಾಲು ವಿಭಾಗ ಮಾಡಿಕೊಂಡಿಲ್ಲ ಎಂದರೆ ಸಾಕ್ಷಿ ಅವರ ಮನೆಯ ಮ್ಯಾಟರ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸುಭಾಷಚಂದ್ರರವರ ತಂದೆ ಗುಂಡಪ್ಪರವರು ಬದುಕಿದ್ದಾಗಲೆ ತನ್ನ ಮಕ್ಕಳು ಸೊಸೆ ಹಾಗೂ ಮೊಮ್ಮಕ್ಕಳು ಎಲ್ಲರ ಹೆಸರಿನಲ್ಲಿ ಆಸ್ತಿ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಸುಭಾಷಚಂದರ ಖರೀದಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಸುಭಾಷಚಂದ್ರರವರ ತಂದೆ ಗುಂಡಪ್ಪರವರುಆಸ್ತಿ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿದ್ದರು ಸಹ ಸುಭಾಷಚಂದ್ರ ಖರೀದಿ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಪ್ರತಿವಾದಿ 13 ರ ಪರ ಶ್ರೀ. ಎಮ.ಎಸ.ಎಸ ವಕೀಲರಿಂದ :</u>**

1. ಈ ದಾವೆ ಒಟ್ಟು ಎಷ್ಟು ಆಸ್ತಿಗಳ ಬಗ್ಗೆ ನಡೆದಿದೆ ಎಂದು ನನಗೆ ಗೊತ್ತಿಲ್ಲ. ಈ ದಾವೆ ಒಟ್ಟು ಕುಟುಂಬದ ಆಸ್ತಿಗಳ ಬಗ್ಗೆ ನಡೆದಿದೆ ಎಂದರೆ ಸರಿ. ಗುಂಡಪ್ಪ ತಂದೆ ಸಾಯಿಬಣ್ಣ ಆಸ್ತಿಗಳನ್ನು ಗಳಿಸಿರುತ್ತಾರೆ ಎಂದರೆ ಸರಿ. ಗುಂಡಪ್ಪರವರು ತನ್ನ ಜೀವನ ತ್ಯಾಗ ಮಾಡಿ ಬೆಡಕಪಳ್ಳಿ,ರಾಮತೀರ್ಥ ಹಾಗೂ ಹಲಚೇರಾ ಗ್ರಾಮದಲ್ಲಿ ಆಸ್ತಿಗಳಿಸಿರುತ್ತಾರೆ ಎಂದರೆ ಸಾಕ್ಷಿ ಗಳಿಸಿರಬಹುದು ಆದರೆ ಜೀವ ತ್ಯಾಗ ಮಾಡಿಲ್ಲ ಎಂದು ಹೇಳುತ್ತಾರೆ. ಬೆಡಕಪಳ್ಳಿ,ರಾಮತೀರ್ಥ

ಹಾಗೂ ಹಲಚೇರಾ ಗ್ರಾಮದಲ್ಲಿ ಇರುವ ಈ ಎಲ್ಲಾ ಆಸ್ತಿಗಳನ್ನು ಅವರ ಮಕ್ಕಳು ಉಳುಮೆ ಮಾಡಿ ಉಪಜೀವನ ಮಾಡುತ್ತಾರೆ ಎಂದರೆ ಸರಿ. ಸರ್ವೆ ನಂಬರ 98 ಜಮೀನನ್ನು ಗುಂಡಪ್ಪ ಯಾರ ಯಾರ ಹೆಸರಿನಲ್ಲಿ ಖರೀದಿ ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೆ ನಂಬರ 98 ಜಮೀನನ್ನು ಗುಂಡಪ್ಪ ಒಂದೇ ದಿನ ಖರೀದಿ ಮಾಡಿ ಚಂದ್ರಕಾಂತ ತಂದೆ ಗುಂಡಪ್ಪರವರ ಹೆಸರಿಗೆ 3 ಎಕರೆ 14 ಗುಂಟೆ, ನಾರಾಯ ತಂದೆ ಸುಭಾಷಚಂದ್ರರವರ ಹೆಸರಿಗೆ 3 ಎಕರೆ 14 ಗುಂಟೆ ಮತ್ತು ಅಮರೀಶ ತಂದೆ ನಾಗೇಂದ್ರಪ್ಪ ಹೆಸರಿಗೆ 3 ಎಕರೆ 13 ಗುಂಟೆ ಜಮೀನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಗುಂಡಪ್ಪ ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ಗುಂಡಪ್ಪ ಬದುಕಿರುವವರೆಗೆ ಅವನೆ ಜಂಟಿ ಕುಟುಂಬದ ಯಜಮಾನ ಎಂದರೆ ನನಗೆ ಗೊತ್ತಿಲ್ಲ. ಗುಂಡಪ್ಪ ಬದುಕಿರುವವರೆಗೆ ಅವನೆ ಜಂಟಿ ಕುಟುಂಬದ ಯಜಮಾನ ಆಗಿದ್ದು ಅವನ ನಿರ್ದೇಶದಂತೆ ಕುಟುಂಬದ ಎಲ್ಲಾ ಕಾರ್ಯ ನಡೆಯುತ್ತಿದ್ದವು ಎಂದರೆ ನನಗೆ ಗೊತ್ತಿಲ್ಲ. ಗುಂಡಪ್ಪರವರ ಕುಟುಂಬದ ಎಲ್ಲಾ ವ್ಯವಹಾರವು ಜಂಟಿ ಕುಟುಂಬದ ನಾತೆಯಿಂದ ಆಗುತ್ತಿತ್ತು ಎಂದರೆ ಸಾಕ್ಷಿ ಅದು ಅವರಿಗೆ ಬಿಟ್ಟ ವಿಷಯ ಎಂದು ಹೇಳುತ್ತಾರೆ. ಗುಂಡಪ್ಪರವರು ಜಂಟಿ ಕುಟುಂಬದ ನಾತೆಯಿಂದ ಆಸ್ತಿ ಖರೀದಿ ಮಾಡಿದ ನಂತರ ಒಬ್ಬೊಬ್ಬರ ಹೆಸರಿಗೆ ಅಂದರೆ ಕುಟುಂಬದ ಸದಸ್ಯರ ಹೆಸರಿಗೆ ಆಸ್ತಿಗಳನ್ನು ಮಾಡುತ್ತಾ ಹೋಗಿರುತ್ತಾರೆ ಎಂದರೆ ಸಾಕ್ಷಿ ಮಾಡಿಕೊಂಡಿರಬಹುದು ಎಂದು ಹೇಳುತ್ತಾರೆ. ಗುಂಡಪ್ಪರವರ ಎಲ್ಲಾ ಮಕ್ಕಳು ದಾವಾ ಆಸ್ತಿಗಳಲ್ಲಿ ಗಡಿ ಗುರುತುಗಳನ್ನು ಹಾಕಿಕೊಂಡು ಪಾಲು ಮಾಡಿಕೊಂಡಿಲ್ಲ ಎಂದರೆ ಸರಿ. ಮೌಖಿಕವಾಗಿ ಪಾಲು ವಿಭಾಗ ಆಗಿದೆ ಎಂದು ನಾನು ಯಾರಿಂದ ತಿಳಿದುಕೊಂಡಿದ್ದೇನೆ ಎಂದರೆ ಸಾಕ್ಷಿ ಶಿವರಾಯ ಮತ್ತು ಭೀಮರಾಯ ಪರಿಟರವರಿಂದ ತಿಳಿದುಕೊಂಡಿದ್ದೇನೆ ಎಂದು ಹೇಳುತ್ತಾರೆ. ಮೌಖಿಕವಾಗಿ ಪಾಲು ವಿಭಾಗ ಆಗಿದೆ ಎಂದು ನಾನು ಹೇಳುತ್ತಿದ್ದು ಯಾರು

ಯಾರಿಗೆ ಎಷ್ಟು ಆಸ್ತಿ ಬಂದಿದೆ ಎಂದು ನನಗೆ ಗೊತ್ತಿಲ್ಲ. ಎಲ್ಲಾ ದಾವಾ ಆಸ್ತಿಗಳು ಜಂಟಿ ಕುಟುಂಬದ ಆಸ್ತಿಗಳಾಗಿದ್ದು ಅದರಲ್ಲಿ ಜಂಟಿ ಕುಟುಂಬದ ಎಲ್ಲಾ ಸದಸ್ಯರಿಗೆ ಸರಿ ಸಮಾನವಾದ ಎಲ್ಲಾ ಹಕ್ಕು ಇದೆ ಎಂದರೆ ಸರಿ. ಗುಂಡಪ್ಪ ತಂದೆ ಸಾಯಿಬಣ್ಣ ತನ್ನ ಜೀವಿತ ಕಾಲದಲ್ಲಿ ಎಲ್ಲಾ ಆಸ್ತಿಗಳನ್ನು ಗಳಿಸಿದ್ದರಿಂದ ಎಲ್ಲಾ ದಾವಾ ಆಸ್ತಿಗಳು ಜಂಟಿ ಕುಟುಂಬದ ಆಸ್ತಿಗಳಾಗಿದ್ದು ಎಂದು ನನಗೆ ಗೊತ್ತಿದ್ದರು ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ವಾದಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.)**

**( ಶ್ರೀ ಎನ ಸಿ ಎಚ ವಾದಿ 9 ರಿಂದ 11 ಪರ ವಕೀಲರು ವಾದಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)**

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.